ಹೇಳಿದಹಾಗೆ ಎನ್.ಆರ್.ಇ.ಪಿ. ಪ್ರೋಗ್ರಾಂನಲ್ಲಿ ಸಾಕಷ್ಟು ಕಟ್ಟಡ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇವೆ ಅವೆಲ್ಲಾ ಡಿ. ಸಿ. ಲೆವೆಲ್‌ನಲ್ಲಿ ತೀರ್ಮಾನವಾಗುತ್ತವೆ. ಆದ್ದರಿಂದ ಅಲ್ಲೇ ಈ ಒಂದು ಕಟ್ಟಡ ತೆಗೆದುಕೊಳ್ಳಲಿಕ್ಕೆ ಸಾಧ್ಯತೆ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕೆಲವು ಪಂಚಾಯಿತಿಗಳಲ್ಲಿ ಆದಾಯ ಬರುವಂಥ ಅಂಗಡಿಗಳನ್ನು ಕಟ್ಟಿ ಅಂಥ ಹೇಳುತ್ತಾರೆ. ಶಾಲಾ ಕಟ್ಟಡಗಳನ್ನು ಕಟ್ಟುತ್ತಿಲ್ಲ. ಕೇವಲ ೧ ಸಾವಿರ ಜನ ವಸತಿ ಇರುವ ಕಡೆ ೧೨ ಅಂಗಡಿಗಳನ್ನು ಕಟ್ಟಿದ್ದಾರೆ. ಅಲ್ಲಿ ವ್ಯಾಪಾರ ಮಾಡುವವರೇ ಇಲ್ಲ. ಇದು ಪಂಚಾಯಿತಿಗಳಿಗೆ ಆಸೆಟ್ ಆಗುತ್ತಿದೆಯೇ ವಿನಹ ಶಾಲೆಗಳಿಗೆ ಹಣ ಕೇಳಿದರೆ ಕೊಡುತ್ತಿಲ್ಲ. ಆದ್ದರಿಂದ ಶಾಲಾ ಕಟ್ಟಡಗಳಿಗೆ ಹೆಚ್ಚು ಗಮನ ಕೊಡುವಂತೆ ಪಂಚಾಯಿತಿಗಳಿಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

(ಉತ್ತರವಿಲ್ಲ)

ಶ್ರೀ ಪಂಪಾಪತಿ.—೧೯೮೧-೮೨ರ ಆ ವ್ಯಯದಲ್ಲಿ ಹಣ ಕಡಿಮೆ ಇದ್ದು, ಶಾಲೆಗಳನ್ನು ಕಟ್ಟಲಿಕ್ಕೆ ಆಗಲಿಲ್ಲ ಅಂಥ ಹೇಳಿದಿರಿ. ೫೦ ಸಾವಿರ ರೂಪಾಯಿ ಕಟ್ಟಿ, ಆ ಜಾಗವನ್ನು ಕೊಟ್ಟರೆ ಪ್ರೌಢಶಾಲೆಯನ್ನು ಕಟ್ಟಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ ಅಥವಾ ಮಂಜೂರು ಮಾಡುತ್ತದೆ ಅಂಥ ಹೇಳುವುದಾದರೆ ಈ ನಳವಾರ ಹಿಂದುಳಿದ ಪ್ರದೇಶ, ಇದು ಹರಿಜನರು, ಲಂಬಾಣಿಗಳು, ಬಡವರು ಇರತಕ್ಕ ಸ್ಥಳ. ಅವರಲ್ಲಿ ಹಣವನ್ನು ಸಂಗ್ರಹಣೆ ಮಾಡಿ ಸರ್ಕಾರಕ್ಕೆ ಡಿಪಾಜಿಟ್ ಮಾಡತಕ್ಕ ಶಕ್ತಿ ಇಲ್ಲ. ಆದ್ದರಿಂದ ಅಂತಹ ಕಡೆ ಸರ್ಕಾರದವರೇ ಜವಾಬ್ದಾರಿ ತೆಗೆದುಕೊಂಡು ಪ್ರೌಢಶಾಲೆ ಕಟ್ಟಿಸಿಕೊಟ್ಟರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ದೃಷ್ಟಿಯಿಂದ ೧೯೮೨-೮೩ನೇ ಸಾಲಿನಅಯಾದರೂ ಇದನ್ನು ಮಂಜೂರು ಮಾಡಿ ಕಟ್ಟಡ ಕಟ್ಟಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನಾವು ಶಾಲೆಯನ್ನು ಮಂಜೂರು ಮಾಡಬೇಕಾದರೆ ಮೊದಲು ಆಲ್ಲಿಯ ಗ್ರಾಮಸ್ಥರು ನಮಗೆ ಜಾಗ ಕೊಡಬೇಕು. ಆವರು ಜಾಗ ಕೊಟ್ಟಮೇಲೆ ಈ ಒಂದು ಬಿಲ್ಡಿಂಗ್ ಎನ್.ಆರ್. ಇ.ಪಿ.ನಲ್ಲಿ ತೆಗೆದುಕೊಳ್ಳಬೇಕೋ ಅಥವಾ ಯಾವ ರೀತಿ ತೆಗೆದುಕೊಳ್ಳಬೇಕು ಅಂಥ ಆಮೇಲೆ ಪರಿಶೀಟನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಸ್. ಭೈರಿ.—ಆಲ್ಲಿ ಜಾಗವನ್ನು ಕೊಟ್ಟಿದ್ದಾರೆ, ರೆಸಲ್ಯೂಷನ್ ಪಾಸ್ ಮಾಡಿದ್ದಾರೆ ಇದೇ ಪ್ರಶ್ನೆಯನ್ನು ಹೋದಸಾರಿ ಕೇಳಿದಾಗ ೧೯೮೨-೮೩ನೇ ಬಜೆಟ್‌ನಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಈಗ ಇಲ್ಲ ಅಂಥ ಹೇಳುತ್ತಿದ್ದೀರಿ ಹಿಂದೆ ಹೇಳಿದ ಉತ್ತರ ನಿಜವೋ ಈಗ ಹೇಳಿತ್ತಿರುವ ಉತ್ತರ ನಿಜವೋ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ,—ಜಾಗ ಕೊಟ್ಟು ರಿಜಿಸ್ಟರ್ ಮಾಡಿಸಿ ಎಲ್ಲಾ ಆಗಿದ್ದರೆ ಆ ಬಿಲ್ಡಿಂಗ್ ಎನ್.ಆರ್.ಇ.ಪಿ.ನಲ್ಲಿ ತೆಗೆದುಕೊಳ್ಳುವುದಕ್ಕೆ ಡಿ. ಸಿ.ಯವರಿಗೆ ಬರೆಯೋಣ.

Distribution of land to S.C. people in D.K. District

16. SRI A. RAMACHANDRA (Sulya).—Will the Minister for Revenue be pleased to state.—

(a) the extent of land distributed among the people belonging to other communities from out of the land earmarked for the Scheduled Scheduled Caste people in Dakshina Kannada District;

(b) if so, the extent of land cancelled;

(c) the extent of such land, indicating the names of villages and taluks;

(d) if it has been so distributed, the action initiated on those concerned officers?

SRI MALLIKARJUNA M. KHARGE (Minister for Revenue).—

(a) It has not been distributed.

(b) (c) and (d) Does not arise in view of the reply given to clause (a) above.

ಶ್ರೀ ಎ. ರಾಮಚಂದ್ರ.—ಈ ಪ್ರಶ್ನೆಯನ್ನು ಇನಕ್ಕಿಂತಲೂ ಮೊದಲು ಸಮಾಜ ಕಲ್ಯಾಣ ಮಂತ್ರಿಗಳಿಗೆ ಹಾಕಿದ್ದೆ; ಅವರು ಸರಿಯಾಗಿ ಉತ್ತರ ಕೊಡಲಿಲ್ಲ. ಈಗ ಕಂದಾಯ ಮಂತ್ರಿಗಳು ಸರಿಯಾಗಿ ಉತ್ತರ ಕೊಡಬಹುದು ಅಂಥ ಹಾಕಿದರೆ ಇವರು ಕೂಡ ಹರಿಜನಗಿರಿಜನರಿಗೆ ಕಾದಿರಿಸಿದ ಜಮೀನನ್ನು ಬೇರೆಯವರಿಗೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಕೊಟ್ಟಿರತಕ್ಕ ನಿದರ್ಶನ ಇದೆ. ಆದ್ದರಿಂದ ಇದರ ಬಗ್ಗೆ ಒಂದು ತನಿಖೆ ಮಾಡಿ ಸುಳ್ಳುವರದಿ ಕೊಟ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ ಅವರು ಕೇಳಿದ ಪ್ರಶ್ನೆ ಏನು ಎಂದರೆ:

"The extent of land distributed among the people belonging to other communities from out the land earmarked for scheduled castes people in Dakshina Kannada District." ಎಂದು ಅಂದರೆ ಇರತಕ್ಕಂಥ ಗವರ್ನ್‌ಮೆಂಟ್ ಲ್ಯಾಂಡನ್ನು ಷೆಡ್ಯೂಲ್ ಕ್ಯಾಸ್ಟ್‌ಗೆ ಇಯರ್ ಮಾರ್ಕ್ ಮಾಡಿದ್ದು ಬೇರೆಯವರಿಗೆ ಕೊಟ್ಟಿದ್ದರ ವಾದ ಇರಬಹುದು, ಅಂಥ ಪ್ರಶ್ನೆ ಹಿನ್ನೆಲೆಯಲ್ಲಿ ಈ ಉತ್ತರ ಕೊಟ್ಟಿದ್ದೇವೆ. ಆದರಲ್ಲಿ ಇಲ್ಲಿಯವರೆಗೆ ೬೧, ೭೫೮ ಎಕರೆ ಹಂಚಿದ್ದೇವೆ, ಅದರಲ್ಲಿ ಸುಮಾರು ೨೧, ೧೭೮ ಎಕರೆ ಹರಿಜನ ಗಿರಿಜನರಿಗೆ ಕೊಟ್ಟಿದ್ದೇವೆ, ೪೦,೫೮೪ ಎಕರೆ ಜಮೀನು ಇತರರಿಗೆ ಕೊಟ್ಟಿದ್ದೇವೆ. ಅದರಲ್ಲಿ ಒಂದು ತೊಂದರೆ ಏನಾಗಿದೆ ಅಂದರೆ, ೧೯೭೯ಕ್ಕೆ ಹಿಂದೆ ಎಷ್ಟು ಜಮೀನು ಹರಿಜನಗಿರಿಜನರಿಗೆ ರೂಲ್ಸ್ ಪ್ರಕಾರ ಕೊಡಬೇಕಾಗಿತ್ತು ಅಷ್ಟು ಕೊಟ್ಟಿಲ್ಲ, ೧೯೭೯ ಆದಮೇಲೆ ಹರಿಜನ ಗಿರಿಜನರಿಗೆ ೫೦ ಪರ್‌ಸೆಂಟ್ ರಿಸರ್ವೇಷನ್ ಮತ್ತೆ ಫಾಲೋ ಮಾಡಿದ್ದೇವೆ, ಅದಕ್ಕೆ ಸುಮಾರು ಮೂರನೇ ಒಂದು ಭಾಗ ಜಮೀನು ಅವರಿಗೆ ಹೋಗಿದೆ. ೫೦ ಪರ್‌ಸೆಂಟ್ ಹೋಗಬೇಕಾದ್ದು ಅದಕ್ಕಾಗಿ ಸ್ವಲ್ಪ ವ್ಯತ್ಯಾಸವಾಗಿದೆ, ಇದನ್ನು ಬಿಟ್ಟು ಬೇರೆ ಪ್ರಶ್ನೆ ಏನಾದರೂ ಇದ್ದರೆ ಮಾನ್ಯ ಸದಸ್ಯರು ಕೇಳಲಿ, ನಾನು ಉತ್ತರ ಕೊಡುತ್ತೇನೆ.

ಶ್ರೀ ಎ. ರಾಮಚಂದ್ರ.—ಹರಿಜನ ಗಿರಿಜನರಿಗಾಗಿ ಕಾದಿರಿಸಲ್ಪಟ್ಟ ಜಮೀನು ಇತರೆಯವರಿಗೆ ಎಷ್ಟು ಕೊಟ್ಟಿದ್ದೀರಾ ಎಂದು ನಾನು ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಹರಿಜನಗಿರಿಜನರಿಗಾಗಿ ಕಾದಿರಿಸಲ್ಪಟ್ಟ ಜಮೀನನ್ನು ಬೇರೆಯವರಿಗೆ ಎಷ್ಟು ಕೊಟ್ಟಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಪ್ರಶ್ನೆಯ ಉದ್ದೇಶ ತಮಗೆ ಆದೇ ಇದ್ದರೆ ನಿಮಗೆ ನಾನು ಬೇರೆ ಉತ್ತರ ಓದಗಿಸಿಕೊಡುತ್ತೇನೆ. ಈಗ ಇರತಕ್ಕ ಲ್ಯಾಂಡ್ ಗ್ರಾಂಟ್ ರೂಲ್ಸ್‌ಪ್ರಕಾರ ಹರಿಜನಗಿರಿಜನರಿಗೆ ೫೦ ಪರ್‌ಸೆಂಟ್ ಬೇರೆಯವರಿಗೆ ೫೦ ಪರ್‌ಸೆಂಟ್ ಕೊಡಬೇಕೆಂದು ಇದೆ. ಎಲ್ಲಿ ೫೦ ಪರ್‌ಸೆಂಟ್ ಕೊಟ್ಟಿಲ್ಲ ಅಲ್ಲಿ ೬೦ ಪರ್‌ಸೆಂಟ್ ಕೊಡಬೇಕೆಂದು ಅಮೆಂಡ್ ಮಾಡಿ ರೂಲ್ಸ್ ಕಳುಹಿಸಿ ಕೊಟ್ಟಿದ್ದೇವೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಟ್ಟಂಥ ಜಮೀನು ಕಡಿಮೆ ಇದೆ, ಈಗ ಸುಮಾರು ೩,೬೭೨ ಎಕರೆ ಇದೆ, ಆ ಪೂರ್ತಿ ಜಮೀನು ಹರಿಜನಗಿರಿಜನರಿಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ, ಆದರಂತೆ ಜಿಲ್ಲಾಧಿಕಾರಿಗಳು ಹರಿಜನಗಿರಿಜನರಿಗೆ ಕೊಡುತ್ತಿದ್ದಾರೆ, ಆದರೆ ವಾಸ್ತವಿಕವಾಗಿ ಇಂಥ ಜಮೀನು ಇವರಿಗೆ ರಿಸರ್ವ್ ಇದೆಯೆಂದು ಅಲ್ಲ. ಈರೀತಿ ರಿಸರ್ವ್ ಇಟ್ಟಿದ್ದ ಜಮೀನನ್ನು ಬೇರೆಯವರಿಗೆ ಕೊಟ್ಟಿದ್ದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಸೂಕ್ತ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀಮತಿ ವೋಟಮ್ಮ.—ಪ್ರತಿ ಗ್ರಾಮದಲ್ಲಿ ಅವೈಲಬಿಲಿಟಿ ಲಿಸ್ಟ್ ಮಾಡುತ್ತಾರೆ. ಆ ಜಮೀನು ಯಾರಿಗೆ ಕೊಡಬೇಕೆಂದಿದೆ ಎಂದರೆ ಫ್ರೀಡಂ ಫೈಟರ್ಸ್‌ಗೆ, ಮಾಜಿ ಯೋಧರಿಗೆ, ಇನ್ನೂ ಮುಂತಾದವರಿಗೆ. ಹರಿಜನಗಿರಿಜನರಿಗೆ ಅರ್ಧ ಎಕರೆ, ಒಂದು ಎಕರೆ ಕೊಟ್ಟರೆ ಉಳಿದ ಜಮೀನನ್ನು ಅವರಿಗೆ ಬೇಕಾದವರಿಗೆ ೧೦ ಎಕರೆ, ೨೦ ಎಕರೆ ಹೀಗೆ ಕೊಡುತ್ತಾರೆ. ಹರಿಜನರಿಗಾಗಿ ಕೊಡಬೇಕೆಂದು ಇಟ್ಟಿರತಕ್ಕ ೫೦ ಪರ್ಸೆಂಟ್ ಭೂಮಿಯನ್ನು ಅವರಿಗೆ ಕೊಟ್ಟಿರುವುದಿಲ್ಲ. ಇಂಥಾದ್ದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೬೦ ಸಾವಿರ ಎಕರೆ ಜಮೀನನ್ನು ಹಂಚಿದ್ದಾರೆ. ಇದರಲ್ಲಿ ೩೦ ಸಾವಿರ ಎಕರೆ ಹರಿಜನರಿಗೆ ಸಿಕ್ಕಬೇಕಾಗಿತ್ತು. ಆದರೆ ಸಿಕ್ಕಿಲ್ಲ. ಕಾರಣ ಏನೆಂದರೆ, ಇದು ೧೯೭೯ನೇ ಇಸವಿಗಿಂತ ಹಿಂದೆ ಹಂಚಿರುವುದು. ಆವತ್ತು ಈ ಹರಿಜನರಿಗೆ ಏನು ಪ್ರಾತಿನಿಧ್ಯ ಸಿಕ್ಕಬೇಕಾಗಿತ್ತೋ ಅದು ಸಿಕ್ಕಿಲ್ಲ. ಈಗ ಅವರಿಗೆ ಕೊಟ್ಟಿರುವುದನ್ನು ನಾವು ಕಿತ್ತುಕೊಂಡು ಕೊಡುವುದಕ್ಕಾಗುವುದಿಲ್ಲ. ಆದರೆ ಈಗಿರತಕ್ಕ ಜಮೀನನ್ನು ಸಂಪೂರ್ಣವಾಗಿ ಹರಿಜನಗಿರಿಜನರಿಗೇ ಕೊಡಬೇಕೆಂದು ಆದೇಶವನ್ನು ನೀಡಿದ್ದೇವೆ. ಸುಮಾರು ೧೦-೧೫ ವರ್ಷದ ಹಿಂದೆ ಇದ್ದಂಥ ಜಿಲ್ಲಾಧಿಕಾರಿಗಳು ಮಾಡಿರತಕ್ಕ ತಪ್ಪುಗಳು ಇವು. ಇಂಥ ತಪ್ಪುಗಳನ್ನು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟರೆ ಇಡೀ ರಾಜ್ಯದಲ್ಲಿ ಆ ಕಾಲದಲ್ಲಿ ಯಾರ್ಯಾರು ಜಿಲ್ಲಾಧಿಕಾರಿಗಳಿದ್ದರು ಅವರಮೇಲೆಲ್ಲಾ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಒಬ್ಬರಲ್ಲಾ ಒಬ್ಬರು ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ. ಮಂತ್ರ ಅಧಿಕಾರದಲ್ಲಿರತಕ್ಕ ಜನರೂ ಕೂಡ ತಪ್ಪುಮಾಡಿದ್ದಾರೆ. ಅದನ್ನೆಲ್ಲಾ ಈ ಸಂದರ್ಭದಲ್ಲಿ ಹೇಳುತ್ತಾ ಹೋಗುವುದಾದರೆ ಅದರಿಂದ ಏನೂ ಪ್ರಯೋಜನ ಇಲ್ಲ.

ಶ್ರೀ ಎ. ರಾಮಂಚಂದ್ರ.—ಮಾನ್ಯ ಅಧ್ಯಕ್ಷರೇ ನಾನು ಕೇಳಿರುವುದು ಮಾನ್ಯ ಮಂತ್ರಿಗಳಿಗೆ ಅರ್ಥವಾಗಿಲ್ಲ. ಜಲ್ಲಾಧಿಕಾರಿಯವರಿಗೂ ಅರ್ಥವಾಗಿಲ್ಲ, ತಹಸೀಲ್ದಾರ್‌ರವರಿಗೂ ಅರ್ಥವಾಗಿಲ್ಲ. ಹಿಂದೆ ಬ್ರಿಟಿಷರ ಕಾಲದಲ್ಲಿ ಹರಿಜನಗಿರಿಜನರಿಗೋಸ್ಕರ ೧೦-೫೦ ಎಕರೆ ಜಮೀನನ್ನು ಕಾದಿರಿಸುತ್ತಿದ್ದರು. ಈ ಜಮೀನನ್ನು ಬೇರೆ ಜಾತಿಯವರಿಗೆ ಕೊಡಬಾರದೆಂದು ಕಾನೂನೂ ಕೂಡ ಇದೆ. ನಾನು ಅದನ್ನು ಕೇಳುತ್ತಿದ್ದೇನೆ. ಆದರೆ ಸಚಿವರು ಹೇಳುತ್ತಿರುವುದು ೧೯೭೪ರ ನಂತರ ನಡೆದಿರುವುದು. ನಾನು ಮದ್ರಾಸ್ ಸರ್ಕಾರದಲ್ಲಿ ಇದ್ದಾಗಲೇ ಈ ಜಮೀನನ್ನು ಕಾದಿರಿಸಲ್ಪಟ್ಟಿದೆ. ಆದರಲ್ಲಿ ಬೇರೆ ಜಾತಿಯವರಿಗೆ ಎಷ್ಟು ಕೊಟ್ಟಿದ್ದೀರಿ ಎಂದು ನಾನು ಕೇಳಿದರೆ ಈಗ ಮಾನ್ಯ ಸಚಿವರು ಕೊಡತಕ್ಕ ಉತ್ತರ ಸರಿಯಾದುದಲ್ಲ.

ಶ್ರೀ ಎಂ.ಎಂ. ಖಾರ್ಗೆ.—ಅದಕ್ಕೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಕಾನೂನು ಅಡಿಯಲ್ಲಿ ಸಿಕ್ಕಿದಂಥ ಜಮೀನನ್ನು ಬೇರೆಯವರು ತೆಗೆದುಕೊಂಡಿದ್ದರೆ ಅದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕರೆಸಿ ಕೇಳುತ್ತೇನೆಂದು ಹೇಳಿದ್ದೇನೆ. ಆದರೆ ಶ್ರೀಮತಿ ಪೋಟಮ್ಮನವರು ಕೇಳಿದ್ದು ಏನೆಂದರೆ ಹರಿಜನಗಿರಿಜನರಿಗೆ ಇಷ್ಟು ಜಮೀನು ಕೊಡಬೇಕು ಅಂತ ಇರುತ್ತದೆ. ಸುಮಾರು ೬೦ ಸಾವಿರ ಎಕರೆಯಲ್ಲಿ ಇವರಿಗೆ ೫೦ ಪರ್ಸೆಂಟ್ ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ ಎಂದು ಕೇಳಿದ್ದಾರೆ. ಆದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನಿಮ್ಮ ಉತ್ತರಕ್ಕೂ ಕೂಡ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಬ್ರಿಟಿಷರು ಅಂದಿನ ಕಾಲದಲ್ಲಿ ಹರಿಜನಗಿರಿಜನರಿಗೆ ಸ್ವಲ್ಪಜಮೀನನ್ನು ರಿಸರ್ವ್ ಇಟ್ಟಿದ್ದರು. ಅಂಥ ಜಮೀನನ್ನು ಅವರಿಗೆ ಎಷ್ಟು ಕೊಟ್ಟಿದ್ದೀರಿ ಎಂದು ನೀವು ಕೇಳಿದ್ದೀರಿ. ಆದಕ್ಕೆ ನಾನು ಉತ್ತರವನ್ನು ಒದಗಿಸಿಕೊಡುತ್ತೇನೆ. ಬಹುಶಃ ನನ್ನ ಉತ್ತರ ತಮಗೆ ಅರ್ಥವಾಗಲಿಲ್ಲವೆಂದು ಅನಿಸುತ್ತದೆ.

ಉಪಾಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY (BUT NOT TAKEN UP)

Supply of Electricity to rural areas of Dharwad Dist.

909. SRI F. S. PATIL (Kalaghatagi).—Will the Minister of State for Power be pleased to state.—

(*a*) the names of Villages which have been provided with electricity in rural areas of Kalaghatagi Taluk of Dharwad District ; (Statistical figures and Villagewise information may please be furnished) ;